ಪ್ರೊ : ಎ.ಡಿ. ನಂಜುಂಡಸ್ವಾಮಿ : ಒಂದು ನಿಮಿಷ ಸಭಾಧ್ಯಕ್ಷರೇ, the Hon'ble Speaker cannot give his ruling unless the truth behind the whole thing comes out.

MADAM DEPUTY SPEAKER : Yesterday we had a detailed discussion about this matter.

ಪ್ರೊ : ಎ.ಡಿ. ನಂಜುಂಡಸ್ವಾಮಿ ಮಾನ್ಯ ಉಪಾಧ್ಯಕ್ಷೆಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಯಾವುದೋ ಒಂದು ಗೌರ್ನಮೆಂಟ್ ಆರ್ಡರ್ ತಂದು ಓದಿದ್ದಾರೆ. ಅದರ ಆಧಾರದ ಮೇಲೆ ರೂಲಿಂಗ್ ಬರಬಾರದೆಂದು ನಾನು ಹೇಳುತ್ತಿರುವುದು. ಇದು ನಿಜ, ಸುತ್ತೋಲೆಯ ಆಧಾರದ ಮೇಲೆ ಮತ್ತು ಅಂಕೆಅಂಶಗಳ ಆಧಾರದ ಮೇಲೆ ಕದ್ದು ತಮಿಳುನಾಡಿಗೆ ನೀರು ಬಿಟ್ಟಿದ್ದಾರೋ ಇಲ್ಲವೋ ಎಂಬುದು ಗೊತ್ತಾದ ಮೇಲೆ ರೂಲಿಂಗ್ ಕೊಡಬಹುದೇ ಹೊರತು ಅದಕ್ಕೆ ಮುಂಚೆ ಕೊಡುವುದಕ್ಕಾಗುವುದಿಲ್ಲ. Iam accusing the Chief Minister for having misled this House by reading a different D.O. letter. This is the D.O. letter which was sent by the Chief Engineer, Irrigation Department, WRDO and this is an important issue, Madam Deputy Speaker and this practice of sending D.O. letters without date and signature has become a new style of this government by which it can run the government without accountability. It can always dens this is not its letter. ಅದಕ್ಕೆ ಅವಕಾಶ ಕೊಟ್ಟರೆ ನಾವು ಸಂಪೂರ್ಣ ಸರ್ವನಾಶವಾಗಿಹೋಗುತ್ತೇವೆ. ಆ ಕಾರಣ ನಿಜವಾಗಿಯೂ ತಲುಪಿದೆಯೋ, ಇದರ ಆಧಾರದ ಮೇಲೆ ನೀರು ಬಿಟ್ಟಿದ್ದೀರಾ? Even the dates have been mentioned as 8th, 15th, 22nd and 29th June.

ಇದು ಸಣ್ಣ ವಿಚಾರವಲ್ಲ. ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಾವು 225 ಜನ ಶಾಸಕರು ಶಾಪಕ್ಕೆ ಗುರಿಯಾಗುತ್ತೇವೆ. ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷೆಣಿಯವರೆ, ಇಲ್ಲಿ ಯಾರೂ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿಲ್ಲ. ಎಲ್ಲರಿಗೂ ಅಷ್ಟೇ ಜವಾಬ್ದಾರಿ ಇದೆ. ಸರ್ಕಾರ ಸಹಿತ ಅಷ್ಟೇ ಜವಾಬ್ದಾರಿಯಿಂದ ಮೊನ್ನೆ ದಿವಸ ಉತ್ತರ ಕೊಟ್ಟಿದೆ. ಪದೇ ಪದೇ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಹಾವು ಅವಕಾಶ ಕೊಡುವುದಾದರೆ ಕಾವೇರಿ ಬೇಸಿನ್‌ನವರು ನಾವು ಇದ್ದೇವೆ. ನಮಗೂ ಆ ಕಷ್ಟ ಗೊತ್ತಿದೆ. ಅವರೊಬ್ಬರೇ ಅಲ್ಲ, ಜವಾಬ್ದಾರಿಯಿಂದ ಇರತಕ್ಕವರು ನಾವು ಇದ್ದೇವೆ.

ಪ್ರೊ : ಎ.ಡಿ. ನಂಜುಂಡಸ್ವಾಮಿ : ಇವರು ಕದ್ದು ನೀರು ಬಿಡದಿದ್ದರೆ, ಅದು ಅವರ ಪತ್ರ ಅಲ್ಲ ಅನ್ನುವುದಾದರೆ ಇವರಿಗೆ ಧೈರ್ಯವಿದ್ದರೆ ಸದನ ಸಮಿತಿ ರಚನೆ ಮಾಡುವುದಕ್ಕೆ ಅವರು ಒಪ್ಪಬೇಕು.

ಉಪಾಧ್ಯಕ್ಷೆಣಿಯವರು : ಮಾನ್ಯ ಸದಸ್ಯರು ಏನು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಆ ವಿಷಯಗಳನ್ನು ಸಭಾಧ್ಯಕ್ಷರಿಗೆ ನಾನೂ ಸಹ ತಿಳಿಸುತ್ತೇನೆ. ಅದನ್ನೆಲ್ಲಾ ಕನ್ಸೀಡರ್ ಮಾಡಿ ಆಮೇಲೆ ತಮ್ಮ ರೂಲಿಂಗ್ ಕೊಡುತ್ತಾರೆ.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು, ಭಾರತ ಸಂವಿಧಾನ 151 (2)ನೇ ಅನುಚ್ಛೇದದ ಮೇರೆಗೆ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1. 1989–90ನೇ ಸಾಲಿನ ಧನ ವಿನಿಯೋಗ ಲೆಕ್ಕಪತ್ರಗಳು
2. 1989–90ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ
3. 1989–90ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ನಂ. 3 ಸಿವಿಲ್)

ಶ್ರೀ ಧರಮ್‌ಸಿಂಗ್ : (ಗೃಹ ಮತ್ತು ಅಬ್ಕಾರಿ ಮಂತ್ರಿಯವರು) ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಕೆಳಕಂಡ ಕಾಗದಪತ್ರಗಳನ್ನು ಸಭೆಯು ಮುಂದಿಡಲು ತಮ್ಮ ಅನುಮತಿ ಕೋರುತ್ತೇನೆ.

1957ನೇ ಇಸವಿಯ ಕರ್ನಾಟಕ ಅಬ್ಕಾರಿ ನಿಯಮದ 71ನೇ ಕಲಮಿನ (4)ನೇ ಉಪ ಕಲಮಿನ ಮೇರೆಗೆ :

1. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಸಾರಾಯಿ (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 13–2–1992ರಂದು ಹೊರಡಿಸಲಾದ ಎಫ್‌ಡಿ 1 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.
2. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಸೀಸೆಯಲ್ಲಿ ಸಾರಾಯಿ ತುಂಬುವ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 29–5–1992ರಂದು ಹೊರಡಿಸಲಾದ ಎಫ್‌ಡಿ 15 ಪಿಡಿಎಸ್ 92ನೇ ಕ್ರಮಾಂಕದ ಅಧಿಸೂಚನೆ.
3. 1992ನೇ ಇಸವಿಯ ಕರ್ನಾಟಕ ಪರವಾನಗಿ (ಸಾಮಾನ್ಯ ಷರತ್ತು) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 5–2–1992ರಂದು ಹೊರಡಿಸಲಾದ ಎಫ್ 11 ಪಿಇಎಸ್ 91ನೇ ಕ್ರಮಾಂಕದ ಅಧಿಸೂಚನೆ.
4. 1992ನೇ ಇಸವಿಯ ಕರ್ನಾಟಕ ಪರಮಾನಗಿಗಳ (ಸಾಮಾನ್ಯ ಷರತ್ತು) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 5–2–1992ರಂದು ಹೊರಡಿಸಲಾದ ಎಫ್‌ಡಿ 4 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.
5. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಮದ್ಯಗಳ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 7–2–1992ರಂದು ಹೊರಡಿಸಲಾದ ಎಫ್‌ಡಿ 2 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.
6. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಅಬಕಾರಿ ಸುಂಕ ಹಾಗೂ ವಿಶೇಷ ರಿಯಾಯಿತಿ ಶುಲ್ಕ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 2–1–1992ರಂದು ಹೊರಡಿಸಲಾದ ಎಫ್‌ಡಿ 25 ಪಿಇಎಸ್ 88ನೇ ಕ್ರಮಾಂಕದ ಅಧಿಸೂಚನೆ.
7. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಭಟ್ಟಿ ಇಳಿಸುವಿಕೆ ಹಾಗೂ ಉಗ್ರಾಣ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 11–2–1992ರಂದು ಹೊರಡಿಸಲಾದ ಎಫ್‌ಡಿ 8 ಪಿಇಎಸ್ 90ನೇ ಕ್ರಮಾಂಕದ ಅಧಿಸೂಚನೆ.
8. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಬಿಯರ್‌ಗಳ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 11–2–1992ರಂದು ಹೊರಡಿಸಲಾದ ಎಫ್‌ಡಿ 10 ಪಿಇಎಸ್ 90ನೇ ಕ್ರಮಾಂಕದ ಅಧಿಸೂಚನೆ.
9. 1992ನೇ ಇಸವಿಯಂದು ಕರ್ನಾಟಕ ಅಬಕಾರಿ (ದ್ರಾಕ್ಷಾರಸಗಳ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 11–2–1992ರಂದು ಹೊರಡಿಸಲಾದ ಎಫ್‌ಡಿ 11 ಪಿಇಎಸ್ 90ನೇ ಕ್ರಮದಂತೆ ಅಧಿಸೂಚನೆ.
10. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ದ್ರಾಕ್ಷಿಯಿಂದ ದ್ರಾಕ್ಷಾರಸ ತಯಾರಿಕೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 11–2–1992ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 90ನೇ ಕ್ರಮಾಂಕದ ಅಧಿಸೂಚನೆ.
11. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಗುಣಾಪಹಾರಕ ಮದ್ಯಸಾರ ಹಾಗೂ ಗುಣಾಪಹಾರಕ ಮದ್ಯಸಾರ ತಯಾರಿಕೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 27–3–1992ರಂದು ಹೊರಡಿಸಲಾದ ಎಫ್‌ಡಿ 5 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.
12. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಮದ್ಯಗಳ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 31–5–1992ರಂದು ಹೊರಡಿಸಲಾದ ಎಫ್‌ಡಿಇ 10 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.

13. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಭಾರತೀಯ ಹಾಗೂ ವಿದೇಶ ಮಾರಾಟ ಮದ್ಯ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 7–5–1992ರಂದು ಹೊರಡಿಸಲಾದ ಎಫ್‌ಡಿ 6 ಪಿಇಎಸ್ 92ನೇ ಕ್ರಮಾಂಕದ ಅಧಿಸೂಚನೆ.
14. 1992ನೇ ಇಸವಿಯ ಕರ್ನಾಟಕ ಅಬ್ಕಾರಿ (ಭಾರತೀಯ ಹಾಗೂ ವಿದೇಶ ಮಾರಾಟ ಮದ್ಯ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 21–2–1992ರಂದು ಹೊರಡಿಸಲಾದ ಎಫ್‌ಡಿ 4 ಪಿಇಎಸ್ 91ನೇ ಕ್ರಮಗಳಿಗ ಅಧಿಸೂಚನೆಗಳನ್ನು ಸಭೆಯ ಮುಂದಿಡುವುದು.

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 20ನೇ ಕಲಮಿನ ಮೇರೆಗೆ :

15. ಅಧಿಸೂಚನೆ ಸಂಖ್ಯೆ ಹೆಚ್.ಡಿ. 309 ಸಿಎನ್‌ಎ 91 ದಿನಾಂಕ 7–1–1992 ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಶ್ರೀ ವೆಂಕಟೇಶ್ವರ ಟಾಕೀಸನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
16. ಅಧಿಸೂಚನೆ ಸಂಖ್ಯೆ ಹೆಚ್‌ಡಿ 291 ಸಿಎಸ್‌ಎ 91 ದಿನಾಂಕ 26–11–1991 ಬಳ್ಳಾರಿ ಜಿಲ್ಲೆ ಎಮ್ಮಿಗನೂರಿನ ಜಡೆ ತಾತಾ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ.
17. ಅಧಿಸೂಚನೆ ಸಂಖ್ಯೆ ಹೆಚ್‌ಡಿ 176 ಸಿಎನ್‌ಎ 91 ದಿನಾಂಕ 2–6–1992 ರಾಯಭಾಗ ರೆ.ಸ. ನಂ. 44 2ಬಿ ರಲ್ಲಿ ಅರೆ ಖಾಯಂ ಚಿತ್ರಮಂದಿರದ ನಿರಾಕ್ಷೇಪಣಾ ಪತ್ರವನ್ನು ವಿಸ್ತರಿಸುವ ಬಗ್ಗೆ.
18. ಅಧಿಸೂಚನೆ ಸಂಖ್ಯೆ ಹೆಚ್‌ಡಿ 2 ಸಿಎನ್‌ಎ 92 ದಿನಾಂಕ 7–1–1992 23ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂದರ್ಭದಲ್ಲಿ ಸಾಕ್ಷ್ಯ ಚಿತ್ರ ಮತ್ತು ನ್ಯೂಸ್‌ರೀಲ್ ಪ್ರದರ್ಶನಕ್ಕೆ ವಿನಾಯಿತಿ ನೀಡುವ ಬಗ್ಗೆ.
19. ಅಧಿಸೂಚನೆ ಸಂಖ್ಯೆ ಹೆಚ್‌ಡಿ 310 ಸಿಎನ್‌ಎ 91 ದಿನಾಂಕ 10–12–1991 ಶ್ರೀ ರಾಘವೇಂದ್ರ ಸಂಚಾರಿ ಚಿತ್ರಮಂದಿರ, ಅನಂದಪ್ಪ, ಶಿವಮೊಗ್ಗ ಜಿಲ್ಲೆ ಇವರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
20. ಅಧಿಸೂಚನೆ ಸಂಖ್ಯೆ ಹೆಚ್.ಡಿ. 109 ಸಿಎನ್‌ಎ 92 ದಿನಾಂಕ 11–6–1992 ಮಾಗಡಿಯಲ್ಲಿರುವ ಶ್ರೀ ಆರ್. ಕಾಂತರಾಜ್‌ರವರ ಚಿತ್ರಮಂದಿರದ ನಿರಾಕ್ಷೇಪಣಾ ಪತ್ರವನ್ನು ವಿಸ್ತರಿಸುವ ಬಗ್ಗೆ.
21. ಅಧಿಸೂಚನೆ ಸಂಖ್ಯೆ ಹೆಚ್‌ಡಿ 290 ಸಿಎನ್‌ಎ 91 ದಿನಾಂಕ 26–11–1992 ಬಳ್ಳಾರಿ ಜಿಲ್ಲೆ ಕುರುಗೋಡಿನ ಶ್ರೀ ಲಕ್ಷ್ಮಿವೆಂಕಟೇಶ್ವರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
22. ಅಧಿಸೂಚನೆ ಸಂಖ್ಯೆ ಹೆಚ್‌ಡಿ 212 ಸಿಎನ್‌ಎ 92 ದಿನಾಂಕ 30–12–1991 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಬ್ರಿಯ ರಾಘವೇಂದ್ರ ಸಂಚಾರಿ ಚಿತ್ರಮಂದಿರ ಮತ್ತು ಬಂಟ್ವಾಳದ ವಿಜಯಲಕ್ಷ್ಮಿ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಆಗಿ ಪರಿವರ್ತಿಸಲು ನೀಡಿದ ನಿರಾಕ್ಷೇಪಣಾ ಪತ್ರದ ಅವಧಿ ವಿಸ್ತರಣೆ ಬಗ್ಗೆ.
23. ಅಧಿಸೂಚನೆ ಸಂಖ್ಯೆ ಹೆಚ್‌ಡಿ 292 ಸಿಎನ್‌ಎ 91 ದಿನಾಂಕ 26–11–1991 ಮನರಂಜನ ವಿರುಪಾಕ್ಷೇಶ್ವರ ಟಾಕೀಸು, ನೆಲ್ಲೂಡಿ, ಹೊಟ್ಟಾಲು, ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
24. ಅಧಿಸೂಚನೆ ಸಂಖ್ಯೆ ಹೆಚ್‌ಡಿ 108 ಸಿಎನ್‌ಎ 92 ದಿನಾಂಕ 17–12–1991 ನಂಜನಗೂಡಿನಲ್ಲಿ ಖಾಯಂ ಚಿತ್ರಮಂದಿರವನ್ನು ನಿರ್ಮಿಸಲು ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ ಶ್ರೀ ಹೆಚ್.ವಿ. ಮಾದಪ್ಪನವರ ಮನವಿ.
25. ಅಧಿಸೂಚನೆ ಸಂಖ್ಯೆ ಹೆಚ್‌ಡಿ 57 ಸಿಎನ್‌ಎ 92 ದಿನಾಂಕ 10–6–1992 ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಚಿಕ್ಕಜಾಜೂರು ಗ್ರಾಮದ ಶ್ರೀ ಮಾರುತಿ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.

26. ಅಧಿಸೂಚನೆ ಸಂಖ್ಯೆ ಹೆಚ್‌ಡಿ 10 ಸಿಎನ್‌ಎ 92 ದಿನಾಂಕ 9–6–1992 ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಗಿಯ ಶ್ರೀ ನಟರಾಜ ಸಂಚಾರಿ ಚಿತ್ರಮಂದಿರವನ್ನು ಟೂರಿಂಗ್ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ;
27. ಅಧಿಸೂಚನೆ ಸಂಖ್ಯೆ ಹೆಚ್‌ಡಿ 231 ಸಿಎನ್‌ಎ 91 ದಿನಾಂಕ 7–2–1992 ಕೊಡಗು ಜಿಲ್ಲೆ ಕುಟ್ಟದ ಜ್ಯೋತಿ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ;
28. ಅಧಿಸೂಚನೆ ಸಂಖ್ಯೆ : ಹೆಚ್‌ಡಿ 127 ಸಿಎನ್‌ಎ 92 ದಿನಾಂಕ 6–6–1992 ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಅನವಟ್ಟಿಯಲ್ಲಿರುವ ಶ್ರೀ ಮಲತೇಶ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ;
29. ಅಧಿಸೂಚನೆ ಸಂಖ್ಯೆ : ಹೆಚ್‌ಡಿ 34 ಸಿಎನ್‌ಎ 92 ದಿನಾಂಕ 10–4–1992 ಬಳ್ಳಾರಿ ಜಿಲ್ಲೆ, ಕುರುಗೋಡು ಗ್ರಾಮದ ಶ್ರೀ ದೊಡ್ಡ ಬಸವೇಶ್ವರ ಸಂಚಾರಿ ಚಿತ್ರಮಂದಿರವನ್ನು ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ನೀಡಿರುವ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ;
30. ಹೆಚ್‌ಡಿ 6 ಸಿಎನ್‌ಎ 92 ದಿನಾಂಕ 10–4–1992 ಧಾರವಾಡ ಜಿಲ್ಲೆಯ ಮುಂಡರಗಿಯ ಟಿ.ಎಂ.ಸಿ. ನಂ. 143ರಲ್ಲಿ ಖಾಯಂ ಚಿತ್ರಮಂದಿರ ನಿರ್ಮಿಸಲು ನೀಡಿರುವ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ;
31. ಹೆಚ್‌ಡಿ 35 ಸಿಎನ್‌ಎ 92 ದಿನಾಂಕ 9–4–1992 ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಗುಡೇಕೋಟೆಯ ಮೆಹಬೂಬ್ ಸುಬಾನಿ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ;
32. ಹೆಚ್‌ಡಿ 19 ಸಿಎನ್‌ಎ 92 ದಿನಾಂಕ 25–2–1992 ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣದಲ್ಲಿ "ಬಾಲಕ ಅಂಬೇಡ್ಕರ್" ಮಕ್ಕಳ ಚಲನಚಿತ್ರ ಪ್ರದರ್ಶಿಸುವ ಬಗ್ಗೆ;
33. ಹೆಚ್‌ಡಿ 291 ಸಿಎನ್‌ಎ 90 ದಿನಾಂಕ 25–4–1992 ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್, ದೋಣಿಮಲೈ ಐರನ್ ಓರ್ ದೋಣಿಮಲೈ ಇವರ ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ;
34. ಹೆಚ್‌ಡಿ 44 ಸಿಎನ್‌ಎ 92 ದಿನಾಂಕ 20–4–1992 ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿನ ಬಯಲು ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ;
35. ಹೆಚ್‌ಡಿ 49 ಸಿಎನ್‌ಎ 92 ದಿನಾಂಕ 27–4–1992 ಗುಲ್ಬರ್ಗಾ ಜಿಲ್ಲೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಚಲನಚಿತ್ರವನ್ನು ಮಕ್ಕಳಿಗೆ ಪ್ರದರ್ಶಿಸುವ ಬಗ್ಗೆ;
36. ಹೆಚ್‌ಡಿ. 45 ಸಿಎನ್‌ಎ 92 ದಿನಾಂಕ 22–4–1992 ರಾಯಚೂರು ಪೊಲೀಸ್ ಕೇಂದ್ರ ಸ್ಥಾನದ ಬಯಲು ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ವಿನಾಯಿತಿ ನೀಡುವ ಬಗ್ಗೆ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1963ನೇ ಇಸವಿಯ ಕರ್ನಾಟಕ ಕಾರಾಗೃಹಗಳ ಅಧಿನಿಯಮದ 63ನೇ ಕಲಮಿನ ಮೇರೆಗೆ

37. ಅಧಿಸೂಚನೆ ಸಂಖ್ಯೆ : ಹೆಚ್‌ಡಿ 20 ಕಾಇನಿ 1991 ದಿನಾಂಕ 28–4–1991 ಕರ್ನಾಟಕ ಕಾರಾಗೃಹಗಳ (ತಿದ್ದುಪಡಿ) ನಿಯಮಾವಳಿ 1991ರ ಬಗ್ಗೆ

1963ನೇ ಇಸವಿಯ ಕರ್ನಾಟಕ ಪೊಲೀಸ್ ಅಧಿನಿಯಮದ 163ನೇ ಕಲಮಿನ ಮೇರೆಗೆ

38. ಅಧಿಸೂಚನೆ ಸಂಖ್ಯೆ ಹೆಚ್‌ಡಿ 46 ಪಿಒಎಸ್‌ಇ 90 ದಿನಾಂಕ 4ನೇ ಜನವರಿ 1992. 1991ನೇ ಇಸವಿಯ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ನೇಮಕಾತಿ ಹಾಗೂ ಸೇವಾ ಷರತ್ತುಗಳು)

(ತಿದ್ದುಪಡಿ) ನಿಯಮಗಳ ಬಗ್ಗೆ; ಅಧಿಸೂಚನೆ ಸಂಖ್ಯೆ : ಹೆಚ್‌ಡಿ 46 ಪಿಓಎಸ್‌ಐಡಿ 90 ದಿನಾಂಕ 4–1–1992.

1952ನೇ ಇಸವಿಯ ವಿಚಾರಣಾ ಆಯೋಗದ ಅಧಿನಿಯಮದ 3(4)ನೇ ಕಲಮಿನ ಮೇರೆಗೆ :

ಎಸ್.ಪಿ. ಹೂಗಾರ ವಿಚಾರಣಾ ಆಯೋಗದ ವರದಿಯನ್ನು ಸರ್ಕಾರವು ಕ್ರಮ ಕೈಗೊಂಡಿರುವ ಜ್ಞಾಪನಾ ಪತ್ರದೊಂದಿಗೆ ಸಭೆಯ ಮುಂದೆ ಮಂಡಿಸುತ್ತೇನೆ.

II. Sri Mallikarjuna M. Kharge (Minister for Revenue, Rural Development and Panchayatraj) ಮಾನ್ಯ ಉಪಾಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ. :

1. Order No. RD 138 ESR 91 dated 2nd July, 1992
Exemption from payment of Stamp Duty and Registration Fee on the construction of Fish Markets/Godown in the State;
2. Order No. RD 113 ESR 92 dated 2nd July, 1992
Exemption from payment of Stamp Duty and Registration Fee payable by the Yelahanka New Town Muslim Welfare Association, Bangalore.
3. Order No. RD 14 ESR 91 dated 7th April, 1992.
Exemption from payment or Stamp Duty and Registration Fee payable by the President, Indian Red Cross Society, Haliyal, U.K. District.
4. Order No. RD 257 ESR 91 dated 17th June, 1992.
Exemption from payment of Stamp Duty and Registration Fee on the purchase of Wadi Water Supply Plant, Wadi Town, Chittapur Taluk, Gulbarga District.
5. Order No. RD 124 ESR 91 dated 18th June, 1992. Exemption from payment of Stamp Duty in favour of M/s. Asain Institute for Rural Development, Bangalore.
as required under sub-section (2) of Section 9 of the Karnataka Stamp Act, 1957.
6. ಅಧಿಸೂಚನೆ ಸಂಖ್ಯೆ : ಆರ್‌ಬಿ:ಆರ್‌ಇವಿ:ಸಿಆರ್: 13:92–93 ದಿನಾಂಕ 10ನೇ ಜೂನ್ 1992, ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ 1991–92ನೇ ಸಾಲಿನ 80 ಹಿಂಗಾರಿ ಗ್ರಾಮಗಳ ಭೂ ಕಂದಾಯವನ್ನು ಮನ್ನಾ ಮಾಡುವುದರ ಬಗ್ಗೆ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯಮಂತ್ರಿ) ಅವರ ಪರವಾಗಿ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.
ಉಪಾಧ್ಯಕ್ಷೆಣಿಯರು : ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು.

1. Order No. CMW 73 CLM 92 dated 12th February, 1992.

Application of sub-section (4) of Section 29A of the Karnataka Co-operative Societies Act, 1959 to the District Central Co-operative Bank Limited, Chickmangalur with following modification :
"The word within 15 days" are modified as after "30 days and within 45 days".

2. Notification No. CMW 515 LM 91 Dated 18–1–92
Exemption of Rayabag Co-operative Sakkare Karkhane Limited, Rayabag from the provisions of Section 27 of the Karnataka Co-operative Societies Act, 1959 till may, 1992.
as required under Section 130 of the Karnataka Co-operative Societies Act, 1959.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಮಾನ್ಯ ಉಪಾಧ್ಯಕ್ಷಣಿಯವರೇ, ನಾನೊಂದು ಚಿಕ್ಕ ಸ್ಟೇಟ್‌ಮೆಂಟ್‌ನ್ನು ಮಾಡಬೇಕಾಗಿದೆ. ತಾವು ಅನುಮತಿ ಕೊಟ್ಟರೆ....

ಉಪಾಧ್ಯಕ್ಷಣಿಯವರು : ಅರ್ಜಿಗಳನ್ನು ಒಪ್ಪಿಸುವುದು ಇದೆ. ಮಾನ್ಯ ಸದಸ್ಯರುಗಳಾದ ಶ್ರೀ ಪೌಕಲ್ ಎಂ. ಮಲ್ಲಪ್ಪ ಹಾಗೂ ಶ್ರೀ ವಸಂತ್ ವಿ. ಸಾಲಿಯಾನ ಅವರುಗಳು ಸಭೆಯಲ್ಲಿಲ್ಲ. ಈಗ ಮುಂದಿನ ವಿಷಯ ವರದಿಗಳನ್ನು ಒಪ್ಪಿಸುವುದು.

ವರದಿಗಳನ್ನೊಪ್ಪಿಸುವುದು

ಶ್ರೀ ಜೆ. ರಾಮಕೃಷ್ಣ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) : ಮಾನ್ಯ ಉಪಾಧ್ಯಕ್ಷರೇ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ 53ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಂ.ಎಲ್. ಖುಸ್ರಾದ್ (ಸಮಿತಿಯ ಅಧ್ಯಕ್ಷರು) : ಮಾನ್ಯ ಉಪಾಧ್ಯಕ್ಷರೇ, ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಯ ಮಧ್ಯಕಾಲಿಕ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಣಿಯವರು : ವರದಿಗಳನ್ನು ಒಪ್ಪಿಸಲಾಯಿತು.

ಶಾಸನ ರಚನೆ

ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, "ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992" ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣಿಯರು : ವಿಧೇಯಕವನ್ನು ಮಂಡಿಸಲಾಗಿದೆ.